# ಕಲಿಕೆಯ ಪುನರ್ಬಲನದೆಡೆಗೆ ಒಂದು ಸಹಕಾರಿ ಧೋರಣೆ


## ವಿನಯ್ ನಾಡಗೀರ್


ಕಲಿಕೆಯ ಪುನರ್ಬಲನವನ್ನು ಸಾಧಾರಣವಾಗಿ ಹಾಗೂ ಸರಿಯಾದುದಾಗಿ, ತರಗತಿಯಲ್ಲಿನ ವರ್ತನೆಗಳನ್ನು ಪುರಸ್ಕಾರ ಮತ್ತು ಶಿಕ್ಷೆಗಳ ಮೂಲಕ ರೂಪಿಸುವ ಧನಾತ್ಮಕ ಅಥವಾ ಋಣಾತ್ಮಕ ಪುನರ್ಬಲನದ ಪ್ರಕ್ರಿಯೆ ಎಂದು ಅರ್ಥೈಸಲಾಗುತ್ತದೆ. ಆದರೆ ಕಲಿಕೆಯನ್ನು ಪುನರ್ಬಲನಗೊಳಿಸುವ ಇತರ ದಾರಿಗಳು ಕೂಡ ಇವೆ. ಫಲಿತಾಂಶದ ಮೇಲೆ ಆಧಾರಿತವಾಗದೇ ಪ್ರಕ್ರಿಯೆಯ ಮೇಲೆ ಒತ್ತು ಕೊಡುವ ಕಲಿಕೆಯ ಅನುಭವವನ್ನು ರೂಪಿಸುವ ಮೂಲಕ ಕೂಡ ಪುನರ್ಬಲನ ಸಾಧ್ಯವಾಗಬಹುದು. ಈ ಲೇಖನವು ಕಲಿಕೆಯನ್ನು ಪುನರ್ಬಲಗೊಳಿಸುವ ಸಹಕಾರಿ ಕಲಿಕೆಯ ಬಗೆಗೆ ಇದೆ. ಕಲಿಕೆಯನ್ನು ಬಹಳಷ್ಟು ರೀತಿಗಳಲ್ಲಿ ಸೃಷ್ಟಿಸಬಹುದು. ಕಲಿಕೆಯನ್ನು ವೈಯಕ್ತಿಕ ಪ್ರಯತ್ನವನ್ನಾಗಿ ನೋಡುವುದು ಇವುಗಳಲ್ಲಿ ಒಂದು ರೀತಿ. ಪ್ರತಿಯೊಬ್ಬ ವ್ಯಕ್ತಿಯೂ ಸ್ವತಂತ್ರವಾಗಿ ಕಲಿಯಲು ಸಾಧ್ಯವಿದೆ ಎಂಬ ತತ್ವದ ಮೇಲೆ ಈ ಕಲ್ಪನೆ ಆಧಾರಿತವಾಗಿದೆ. ಆದರೆ ಕಲಿಕೆಯ ಶ್ರೇಣಿಯ ಇನ್ನೊಂದು ಬದಿಯಲ್ಲಿ, ಕಲಿಕೆ ಒಂದು ಸಾಮಾಜಿಕ ಪ್ರಕ್ರಿಯೆ ಎಂದು ಕೂಡ ಹೇಳಬಹುದು. ಸಾಮಾಜಿಕ ಎಂಬ ಪದ ಕಲಿಕೆ ಎಂಬುದು ಸಹಕಾರದೊಡನೆ ಸಂಬಂಧಿಸಿದೆ ಎಂಬುದನ್ನು ಅನ್ವಯಿಸುತ್ತದೆ. ಈ ಲೇಖನದಲ್ಲಿ, ಸಹಕಾರೀ ಕಲಿಕೆ ಎಂಬ ವಿಚಾರವನ್ನು ನಿಮ್ಮ ಮುಂದೆ ತೆರೆದಿಡಲು ಬಯಸುತ್ತೇನೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕಲಿಕಾರ್ಥಿಯು ಬರೀ ಜ್ಞಾನಕ್ಕೆ ಸಂಬಂಧಪಟ್ಟಂತೆ ಮಾತ್ರವಲ್ಲದೇ, ಕಲಿಕೆಯ ಹಿಂದಿರುವ ಪ್ರಮಾಣಕ ಹಾಗೂ ಸಾಮಾಜಿಕ ಮೌಲ್ಯಕ್ಕೆ ಸಂಬಂಧಿಸಿದಂತೆ ಕೂಡ ತಿಳುವಳಿಕೆ ಗಳಿಸಲು ಸಹಾಯ ಮಾಡುವ ಸಾಮರ್ಥ್ಯ ಸಹಕಾರಿ ಕಲಿಕೆಯನ್ನು ಉತ್ಕೃಷ್ಟ ರೀತಿಯ ಕಲಿಕೆಯನ್ನಾಗಿ ಮಾಡುತ್ತದೆ ಎಂದು ಹೇಳಲು ಬಯಸುತ್ತೇನೆ. ಈ ಲೇಖನದ ಎರಡನೇ ಭಾಗದಲ್ಲಿ, ವಿದ್ಯಾರ್ಥಿಗಳಿಗೋಸ್ಕರ ಸಹಕಾರೀ ಕಲಿಕೆಯ ಅನುಭವವನ್ನು ರೂಪಿಸುವಾಗ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತೇನೆ. ಕಡೆಯದಾಗಿ, ನಾನು ಸಹಕಾರಿ ಕಲಿಕೆಯ ಚಟುವಟಿಕೆಯಲ್ಲಿ ಯಾವ ಮೌಲ್ಯಗಳು ಅಂತರ್ಗತವಾಗಿವೆ ಎಂದು ನನಗನಿಸುತ್ತದೆಯೋ ಅವುಗಳ ಬಗ್ಗೆ ಕೊಂಚ ಹೇಳುತ್ತೇನೆ.

## ಸಹಕಾರಿ ಕಲಿಕೆ ಎಂದರೇನು?

ಕಲಿಕೆಯ ಪುನರ್ಬಲನವನ್ನು ಸಂಕ್ಷಿಪ್ತವಾಗಿ ಈ ಉಕ್ತಿಯ ಮೂಲಕ ಹೇಳಬಹುದು 'ಯಾರು ಕಲಿಸುತ್ತಾರೋ ಅವರು ಎರಡೆರಡು ಸಲ ಕಲಿಯುತ್ತಾರೆ'. ವಿದ್ಯಾರ್ಥಿಗಳು ಮತ್ತೊಬ್ಬರಿಗೆ ಕಲಿಸುತ್ತಲೇ ತಮಗೇ ಗೊತ್ತಿಲ್ಲದಂತೆ ತಮ್ಮ ಕಲಿಕೆಯನ್ನೂ ಪುನರ್ಬಲನಗೊಳಿಸುವ ಸಹಕಾರಿ ಕಲಿಕೆಗಿಂತ ಇದಕ್ಕೆ ಬೇರೆ ಒಳ್ಳೆಯ ಉದಾಹರಣೆಯಿಲ್ಲ. ಸಹಕಾರಿ ಕಲಿಕೆಯು ಕಲಿಕೆಯ ಪುನರ್ಬಲನಕ್ಕೆ ಈ ರೀತಿ ಕೊಡುಗೆ ನೀಡುತ್ತದೆ.

- ಕಲಿಯುವವರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತದೆ
- ಸಹಪಾಠಿಗಳ ಕಲಿಕೆ ಮತ್ತು ಕಲಿಸುವುದನ್ನು ಪ್ರೋತ್ಸಾಹಿಸುತ್ತದೆ.
- ವಿಶ್ಲೇಷಿಸುವುದಕ್ಕೆ, ಪುನರಾವರ್ತಿಸುವುದಕ್ಕೆ ಮತ್ತು ನೆನಪಿಸಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ.
- ಚರ್ಚೆ ಮತ್ತು ಸ್ಪಷ್ಟೀಕರಣಕ್ಕೆ ಅವಕಾಶ ನೀಡುತ್ತದೆ.
- ಕಲಿಯುವವರಿಗೆ ಸ್ವಾಯತ್ತತೆಯ ಅವಕಾಶ ನೀಡುತ್ತದೆ.

1. ನಮ್ಮ ಮಕ್ಕಳು ಸಹಕರಿಸುವುದನ್ನು ಕಲಿಯಬೇಕು ಎಂದು ನಾವು ಹೇಳುವಾಗ, ಮನಸ್ಸಿಗೆ ಬರುವ ಒಂದು ಪದ ಎಂದರೆ 'ಗುಂಪುಗೂಡಿಸುವುದು' (grouping). ವಿದ್ಯಾರ್ಥಿಗಳನ್ನು ಗುಂಪುಗೂಡಿಸುವ ಮೂಲಕ, ಮಕ್ಕಳು ಒಬ್ಬರು ಮತ್ತೊಬ್ಬರಿಂದ ಕಲಿಯುತ್ತಾರೆ ಎಂದು ನಾವು ಅಂದುಕೊಳ್ಳುತ್ತೇವೆ. ಸಹಕಾರಿ ಕಲಿಕೆಯ ಜೊತೆಗೆ ನಾವು ಸಂಬಂಧ ಕಲ್ಪಿಸುವ ಮತ್ತೊಂದು ವಿಚಾರವೆಂದರೆ ಸಹಪಾಠಿಗಳೊಡನೆಯ ಕಲಿಕೆಯ ಪ್ರಕ್ರಿಯೆ. ಇವೆರಡೂ ಸಹಕಾರೀ ಕಲಿಕೆಗೆ ಅತ್ಯವಶ್ಯ, ಆದರೆ ಸಹಕಾರಿ ಕಲಿಕೆಯು ಏನನ್ನು ಒಳಗೊಂಡಿರುತ್ತದೆ ಎಂಬುದರ ಬಗ್ಗೆ ನಮಗಿರುವ ತಿಳುವಳಿಕೆಯನ್ನು ನಾವು ವಿಸ್ತರಿಸಬೇಕಾಗುತ್ತದೆ. ಜಾನ್ಸನ್ ಮತ್ತು ಜಾನ್ಸನ್ (1999) ಅವರು ಸಹಕಾರಿ ಕಲಿಕೆಯು ಐದು ಮೂಲಭೂತ ಅಂಶಗಳನ್ನು ಹೊಂದಿರುತ್ತದೆ ಎಂದು ಹೇಳುತ್ತಾರೆ.ಧನಾತ್ಮಕ ಪರಸ್ಪರ ಅವಲಂಬನೆ (Positive interdependence): ಇದು ' ಪ್ರತಿಯೊಬ್ಬರೂ ಯಶಸ್ವಿಯಾಗುವ ತನಕ ನಾನು ಯಶಸ್ವಿಯಾಗಲು ಸಾಧ್ಯವಿಲ್ಲ' ಅಥವಾ ' ಎಲ್ಲರಿಗಾಗಿ ಒಬ್ಬರು,ಒಬ್ಬರಿಗಾಗಿ ಎಲ್ಲರೂ' ಎಂಬ ಕಲ್ಪನೆಗಿಂತ ಬೇರೆಯಲ್ಲ. ಹಾಗಾಗಿ ನಾವು ಕೇವಲ ವೈಯಕ್ತಿಕ ಗುರಿಗಳಷ್ಟೇ ಅಲ್ಲ, ಒಂದು ಗುಂಪಿನ ದೃಷ್ಟಿಯಿಂದ ಸಮಗ್ರವಾದ ಪರಸ್ಪರ ಕಲಿಕೆಯ ಗುರಿಗಳನ್ನು ಸೃಷ್ಟಿಗೊಳಿಸುವುದು ಅವಶ್ಯಕವಾಗುತ್ತದೆ. ಧನಾತ್ಮಕ ಪರಸ್ಪರ ಅವಲಂಬನೆಯನ್ನು ಹೆಚ್ಚಿಸಲು ಶಿಕ್ಷಕರು ಗುಂಪಿನ ಸದಸ್ಯರುಗಳಿಗೆ ದೊಡ್ಡ ಯೋಜನೆಯೊಂದರ ಸಣ್ಣಸಣ್ಣ ಭಾಗಗಳನ್ನು ವಹಿಸಬಹುದು. ಇದನ್ನು ನಾವು ಕಲಸುಚಿತ್ರದ ಒಗಟೊಂದನ್ನು (jigsaw puzzle) ಗುಂಪೊಂದರ ಬೇರೆಬೇರೆ ಸದಸ್ಯರುಗಳಿಗೆ ಕೊಟ್ಟು ಸಂಪೂರ್ಣ ಚಿತ್ರಕ್ಕೋಸ್ಕರ ಅವರು ಒಟ್ಟಿಗೇ ಕೆಲಸ ಮಾಡಬೇಕಾಗುವ ಸಂದರ್ಭದಂತೆ ಯೋಚಿಸಬಹುದು.
2. ವೈಯಕ್ತಿಕ ಹೊಣೆಗಾರಿಕೆ (Individual accountability): ವಿದ್ಯಾರ್ಥಿಗಳು ಸಮಗ್ರ ಚಿತ್ರಣದಿಂದ ಬೇರೆಯಾಗಿ ಪ್ರತ್ಯೇಕ ವ್ಯಕ್ತಿಗಳಾಗಿ ಕೆಲಸ ಮಾಡುವಾಗ ಹೊಣೆಗಾರಿಕೆಯನ್ನು ಅಳೆಯುವುದು ಹೆಚ್ಚು ಕಷ್ಟಕರವಾಗಿ ಪರಿಣಮಿಸುತ್ತದೆ. ಆದರೆ ಸಹಕಾರಿ ಕಲಿಕಾ ರಚನೆಯಲ್ಲಿ, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ. ಗುಂಪಿನ ಗುರಿಯನ್ನು ಸಾಧಿಸುವಲ್ಲಿ ವಿದ್ಯಾರ್ಥಿಗಳ ಮೇಲೆ ಪ್ರತ್ಯೇಕವಾಗಿ ಹೊಣೆಗಾರಿಕೆಯನ್ನು ವಹಿಸಲಾಗುತ್ತದೆ.
3. ಮುಖಾಮುಖಿ ಮಾತುಕತೆ (Face-to-face interaction): ತರಗತಿಯ ಯೋಜನೆಯೊಂದರ ಸಲುವಾಗಿ ಸಹಕಾರಿಯಾಗಿ ಕೆಲಸ ಮಾಡಬೇಕೆಂದು ಹೇಳಿದಾಗ, ಒಂದು ಸಾಮೂಹಿಕ ಗುರಿಯನ್ನು ತಲುಪಲು ವಿದ್ಯಾರ್ಥಿಗಳು ಒಬ್ಬರು ಇನ್ನೊಬ್ಬರಿಗೆ ಬೆಂಬಲಿಸಿ, ಸಹಾಯ ಮಾಡುತ್ತಾರೆ. ಇದರಲ್ಲಿ ಪರಸ್ಪರರ ಮೂಲಕ ಕೆಲವು ಧೋರಣೆಗಳು,ಯೋಚನಾ ಸರಣಿಗಳು, ಮತ್ತು ಗ್ರಹಣಶೀಲ ಚಟುವಟಿಕೆಗಳನ್ನು ಉದ್ದೀಪಿತಗೊಳಿಸಲಾಗುತ್ತದೆ, ಇದನ್ನು ಪರಸ್ಪರ ಪ್ರಶ್ನಿಸುವ ಮೂಲಕ ಅಥವಾ ತಮ್ಮ ಜ್ಞಾನವನ್ನು ಇತರರೊಡನೆ ಹಂಚಿಕೊಳ್ಳುವ ಮೂಲಕ ಮಾಡಲಾಗುತ್ತದೆ.
4. ಸಾಮಾಜಿಕ ಕೌಶಲಗಳು (Social skills): ಸಹಕಾರಿ ಕೆಲಸದ ಅತೀ ಮೂಲಭೂತ ಅಂಶವೇನೆಂದರೆ ಇದು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕೌಶಲಗಳನ್ನು ಪೋಷಿಸುತ್ತದೆ ಎನ್ನುವುದು. ಗುಂಪಿನಲ್ಲಿ ಕಲಿಕೆ ಸಾಧ್ಯವಾಗಬೇಕಾದರೆ, ವಿದ್ಯಾರ್ಥಿಯು ಸಂವಹನದ, ಬಿಕ್ಕಟ್ಟನ್ನು ಪರಿಹರಿಸುವ, ನಂಬಿಕೆಯನ್ನು ಬೆಳೆಸುವ ಮತ್ತು ತಂಡದ ಆಟಗಾರರಾಗುವ ಸಾಮರ್ಥ್ಯಗಳನ್ನು ಪ್ರದರ್ಶಿಸಬೇಕು.
5. ಗುಂಪುಗೂಡಿ ಸಂಸ್ಕರಿಸುವುದು (Group processing): ಇದು ಸಹಕಾರಿ ಕಲಿಕೆಯ ಆಚೆಗಿನ ಮಟ್ಟದ ಅಂಶವಾಗಿದೆ. ಇಲ್ಲಿ ಗುಂಪಿನಲ್ಲಿರುವ ವಿದ್ಯಾರ್ಥಿಗಳು ಅವರಿಗೆ ಎದುರಾದ

ಪರಿಣಾಮಕಾರಿತ್ವ ಮತ್ತು ಕುಂದುಕೊರತೆಗಳ ಬಗ್ಗೆ ಅಭಿವ್ಯಕ್ತಿಸುತ್ತಾರೆ ಮತ್ತು ಒಳಗೊಂಡ ಪ್ರಕ್ರಿಯೆಯ ಬಗ್ಗೆ ಪರ್ಯಾಲೋಚಿಸುತ್ತಾರೆ. ಗುಂಪಿನ ಪ್ರಕ್ರಿಯೆಯ ಬಗ್ಗೆ ಪರ್ಯಾಲೋಚಿಸುವುದು ಈ ಪ್ರಕ್ರಿಯೆಯಲ್ಲಿ ಬೆಸೆದಂಥ ಸಂಬಂಧಗಳ ಬಗೆಗಿನ ಪರ್ಯಾಲೋಚನೆಯಾಗಿರುತ್ತದೆ.

**ಸಹಕಾರಿ ಕಲಿಕೆಯ ಅನುಭವವನ್ನು ರೂಪಿಸುವ ಕೆಲವು ಮಾರ್ಗಸೂಚಿಗಳು**

ಸಹಕಾರಿ ಕಲಿಕೆಯ ಅನುಭವವನ್ನು ಪರಿಣಾಮಕಾರಿಯಾಗಿಸಬೇಕೆಂದರೆ, ಶಿಕ್ಷಕರು ವಿದ್ಯಾರ್ಥಿಗಳೊಡನೆ ತೊಡಗಿಸಿಕೊಳ್ಳುವಾಗ ಈ ಕೆಲವು ಸೂಚಿಗಳನ್ನು ಪಾಲಿಸಬಹುದು. ಇವು ಸ್ಥೂಲವಾದ ಮಾರ್ಗಸೂಚಿಗಳಾಗಿದ್ದು, ಇನ್ನೂ ಹೆಚ್ಚಿನ ಅಂಶಗಳನ್ನು ಸೇರಿಸಿ ಈ ಪಟ್ಟಿಯನ್ನು ವಿಸ್ತರಿಸಬಹುದು.

1. ಸಹಕಾರಿ ಕಲಿಕೆಯ ಚಟುವಟಿಕೆಯ ಉದ್ದೇಶಗಳನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು. ಶಿಕ್ಷಕರು ಚಟುವಟಿಕೆಯ ಅನುಕೂಲಗಳನ್ನು ವಿವರಿಸುವುದರೊಂದಿಗೆ ಚಟುವಟಿಕೆ ಶುರುವಾದರೆ ಉತ್ತಮ. ಇದು ವಿಶೇಷವಾಗಿ ತರಗತಿಯಲ್ಲಿ ಕಲಿಸಿದ್ದನ್ನು ಪುನರಾವರ್ತನೆ ಮಾಡುವಾಗ ಬಹಳ ಸಹಾಯಕ್ಕೆ ಬರುತ್ತದೆ.
2. ಶಿಕ್ಷಕರು ತರಗತಿಯೊಳಗಿನ ಕಲಿಕೆಗೆ ಅನುರೂಪವಾಗಿ ಹೊರಾಂಗಣ ಆಟಗಳನ್ನು ಆಡಿಸಬೇಕು. ವಿದ್ಯಾರ್ಥಿಗಳು ಸಹಕಾರದ ಮೌಲ್ಯವನ್ನು ಚೆನ್ನಾಗಿ ಅರಿಯುವಲ್ಲಿ ಕ್ರೀಡೆ ಮತ್ತು ಆಟಗಳು ಅತ್ಯುತ್ತಮ ಪಾತ್ರ ವಹಿಸುತ್ತವೆ. ಗುಂಪಿನ ಆಟಗಳು ಮತ್ತು ಕ್ರೀಡೆಗಳು ವಿದ್ಯಾರ್ಥಿಗಳಿಗೆ ತಮ್ಮ ಸಹಕಾರವು ಹೇಗೆ ಗುರಿಯೊಂದನ್ನು ಸಾಧಿಸಲು ಕಾರಣವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಕಂಡುಕೊಳ್ಳಲು ಸಹಾಯ ಮಾಡುತ್ತವೆ. ಶಿಕ್ಷಕರು ಪಟದ ಆಟಗಳನ್ನು (board games) ಮತ್ತು ಒಡಪಿನ ಆಟಗಳನ್ನು ಬಳಸಿಕೊಂಡು ಅವನ್ನು ಸಹಕಾರಿ ಚಟುವಟಿಕೆಯನ್ನಾಗಿ ಪರಿವರ್ತಿಸಬಹುದು.
3. ಚರ್ಚೆಗಳಲ್ಲಿ ವಿದ್ಯಾರ್ಥಿಗಳು ಯಾವುದೇ ಹೆದರಿಕೆ-ಹಿಂಜರಿಕೆಗಳಿಲ್ಲದೇ ಪಾಲ್ಗೊಳ್ಳಲು ಶಿಕ್ಷಕರು ಪ್ರೋತ್ಸಾಹಿಸಬೇಕು; ಮುಕ್ತಾಂತ ಪ್ರಶ್ನೆಗಳನ್ನು ಮತ್ತು 'ಹೀಗಿದ್ದರೆ' ಸನ್ನಿವೇಶಗಳು ಮತ್ತು ಊಹಾತ್ಮಕ ಸನ್ನಿವೇಶಗಳನ್ನು ಅವರ ಮುಂದಿಡುವ ಮೂಲಕ ಪ್ರಶ್ನೆ-ಕೇಳುವ ಪ್ರಕ್ರಿಯೆಯನ್ನು ಸುಗಮಗೊಳಿಸಬಹುದು. ಈ ಮೇಲ್ಮಟ್ಟದ ಪ್ರಶ್ನೆಗಳು ಮತ್ತು ಊಹಾತ್ಮಕ ಸನ್ನಿವೇಶಗಳ ಮೂಲಕ ಮಕ್ಕಳ ವಿಮರ್ಶಾತ್ಮಕ ವಿಚಾರ ಕೌಶಲ್ಯಗಳು ಮತ್ತು ಭಾಷಾ ಕೌಶಲ್ಯಗಳು ಕೂಡ ಪುನರ್ಬಲನಗೊಳ್ಳುತ್ತವೆ.
4. ಶಿಕ್ಷಕರು ಸಹಕಾರಿ ಚಟುವಟಿಕೆಯೊಂದನ್ನು ಸರಿಯಾಗಿ ರಚಿಸದೇ ಹೋದರೆ ಎಲ್ಲಾ ಗೊಂದಲಮಯವಾಗುವ  ಸಾಧ್ಯತೆ ಇರುತ್ತದೆ. ಶಿಕ್ಷಕರು ಭಾಷೆಯ ಬಳಕೆ, ಸರದಿಯ ಪಾಲನೆ, ಅಗತ್ಯ ಬಿದ್ದಾಗ ಸಹಾಯಕ್ಕಾಗಿ ವಿನಂತಿಸುವುದು, ತಮ್ಮ ಭಿನ್ನಾಭಿಪ್ರಾಯವನ್ನು ಗಲಾಟೆಯಿಲ್ಲದೇ ವ್ಯಕ್ತಪಡಿಸುವುದು, ಸಮಯದ ಮಿತಿ ಇತ್ಯಾದಿಗಳಿಗೆ ಸಂಬಂಧಿಸಿದ ಚಟುವಟಿಕೆಯ ಮಿತಿಗಳ ನಿಯಮಗಳನ್ನು ಮಾಡಿಡಬೇಕು.
5. ಸಹಕಾರದ ಮೂಲಕ ಕಲಿಕೆಯನ್ನು ಬಲಪಡಿಸಲು ಬೇಕಾದ ಅತೀ ಮೂಲಭೂತ ಪೂರ್ವಾಪೇಕ್ಷೆಗಳಲ್ಲಿ ಒಂದಾದ ಅಂಶವೆಂದರೆ ಶಿಕ್ಷಕರು ತರಗತಿಯೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಹೊಂದಿರಬೇಕು ಎನ್ನುವುದು. ಅಂದರೆ, ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳ ಬಲ ಮತ್ತು ತಮ್ಮ ಸಹಪಾಠಿಗಳಿಗೆ ಹೋಲಿಸಿದರೆ ಅವರು ಯಾವ ಮಟ್ಟದಲ್ಲಿದ್ದಾರೆ ಎಂಬುದರ ಬಗ್ಗೆ ಅರಿವಿರಬೇಕು. ವಿದ್ಯಾರ್ಥಿಗಳನ್ನು ಗುಂಪಿನಲ್ಲಿ ವಿಂಗಡಿಸುವಾಗ, ಕೌಶಲ್ಯಗಳು ಮತ್ತು ಬಲಗಳ ವಿತರಣೆಯು ಜಾಗರೂಕತೆಯಿಂದ

ಆಗಬೇಕು, ಇದರಿಂದಾಗಿ ಕೆಲವು ವಿದ್ಯಾರ್ಥಿಗಳು ಚರ್ಚೆ/ಚಟುವಟಿಕೆಯ ಮೇಲೆ ಸಂಪೂರ್ಣ ಪ್ರಾಧಾನ್ಯ ಸಾಧಿಸುವುದು ತಪ್ಪುತ್ತದೆ. ಹಾಗಾಗಿ, ಗುಂಪೊಂದನ್ನು ರೂಪಿಸುವಾಗ ಶಿಕ್ಷಕರು ಸಮತೋಲನವನ್ನು ಕಾದುಕೊಳ್ಳಬೇಕು. ಕೆಲವು ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಪಾತ್ರಗಳನ್ನು ವಹಿಸಿಕೊಟ್ಟರೆ ಅವರ ಕೆಲಸವನ್ನು ಚೆನ್ನಾಗಿ ಸುಸಂಘಟಿಸಲು ಸಾಧ್ಯವಾಗುತ್ತದೆ. ಇತರರು, ಗುಂಪಿನ ಸದಸ್ಯರುಗಳಿಗೇ ಯೋಚಿಸಿ ನಿರ್ಣಯಕ್ಕೆ ಬರಲು ಬಿಡುವುದು ಅತ್ಯುತ್ತಮ.

ಶಿಕ್ಷಕರಾಗಿ, ನಾವು ಅರಿತಿರುವ ಪ್ರಕಾರ ಅತೀ ಪರಿಣಾಮಕಾರಿ ಕಲಿಕಾ ಚಟುವಟಿಕೆಗಳು ಈ ಎರಡು ಮಾನದಂಡಗಳನ್ನು ಪೂರ್ಣಗೊಳಿಸಬೇಕು: ಮೊದಲನೆಯದಾಗಿ, ಅವು ಹಂತಗಳಿಗೆ ಸಮರ್ಪಕವಾಗಿದ್ದೂ ತೊಡಗಿಸುವಿಕೆಯನ್ನು ಬೇಡುವಂಥವು ಮತ್ತು ಎರಡನೆಯದಾಗಿ, ಅವು ನಮಗೆ ಸಂಬಂಧಪಟ್ಟವಾಗಿರಬೇಕು. ಆದರೆ, ಸಾಮೂಹಿಕ ಸಹಕಾರಿ ಚಟುವಟಿಕೆಯ ಮೂಲಕ ಆಗುವ ಪುನರ್ಬಲನವು ಪೂರ್ಣಗೊಳಿಸಬೇಕಾದ ಮೂರನೆಯ ಮಾನದಂಡವೊಂದಿದೆ - ಅದೆಂದರೆ ವಿದ್ಯಾರ್ಥಿಯು ಆ ಚಟುವಟಿಕೆಯನ್ನು ಗುಂಪಿನಲ್ಲಿ ಮಾತ್ರ ಮಾಡಲು ಸಾಧ್ಯವಾಗಬೇಕು. ಗುಂಪಿನ ಪುನರ್ಬಲನವು ಸಹಕಾರಿ ಸ್ವರೂಪದ್ದಾಗಿರುವುದರಿಂದ ಬಹಳ ಪರಿಣಾಮಕಾರಿಯೆಂದು ಸಾಬೀತಾಗಿದೆ.

ಸಹಕಾರಿ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಪುನರ್ಬಲಪಡಿಸುವುದು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಬ್ಬರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಬೇಡುತ್ತದೆ. ಹಾಗಾಗಿ, ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಇವು ಬಹಳ ಸಮಯ ತೆಗೆದುಕೊಳ್ಳುತ್ತವೆ ಮತ್ತು, ಶಿಕ್ಷಕರಿಗೆ ಇದನ್ನು ರೂಪಿಸಿ ಪರೀಕ್ಷಿಸಲು ಬಹಳ ತ್ರಾಸದಾಯಕವಾಗಿ ಪರಿಣಮಿಸುತ್ತದೆ. ಈ ಚಟುವಟಿಕೆಗಳಿಗೆ ಅಪಾರವಾದ ಪೂರ್ವಯೋಜನೆಗಳು ಬೇಕಾದರೂ, ಇದರ ಒಳ್ಳೆಯ ಅಂಶಗಳು ಎಷ್ಟಿವೆ ಎಂದರೆ ಇದನ್ನು ಬಳಸದೇ ಇರಲು ಸಾಧ್ಯವೇ ಇಲ್ಲ. ಇಂಥ ವಿಧಾನವು ವಿದ್ಯಾರ್ಥಿಗಳ ಆತ್ಮವಿಶ್ವಾಸ ಮತ್ತು ಸ್ಪೂರ್ತಿಯ ಮಟ್ಟವನ್ನು ಹೆಚ್ಚಿಸುವುದಲ್ಲದೇ ಅವರು ತಮ್ಮ ಸಹಪಾಠಿಗಳೊಂದಿಗೆ ಕಲಿತು ತಮ್ಮ ತಪ್ಪು ಕಲ್ಪನೆಗಳನ್ನು ಪರಿಹರಿಸುವಾಗ ಅವರ ಅರ್ಥಮಾಡಿಕೊಳ್ಳುವಿಕೆ ಹೆಚ್ಚುತ್ತದೆ. ಈ ರೀತಿಯ ತೊಡಗಿಸಿಕೊಳ್ಳುವಿಕೆಯ ದೀರ್ಘಕಾಲೀನ ಅನುಕೂಲಗಳು ತಕ್ಷಣದ ಪರಿಧಿಯನ್ನು ಮೀರಿ ವಿದ್ಯಾರ್ಥಿಯನ್ನು ಸಮಾಜದೊಳಗೆ ಒಂದಾಗಲು ತಯಾರಿ ಮಾಡುವುದರಲ್ಲಿ ಒಳ್ಳೆಯ ರೀತಿಯಲ್ಲಿ ಸಹಾಯ ಮಾಡುತ್ತದೆ.

***ಪರಾಮರ್ಶನ***

Goldman, Alvin and O'Connor, Cailin, "Social Epistemology", The Stanford Encyclopedia of Philosophy (Winter 2021 Edition), Edward N. Zalta (ed.), https://plato.stanford.edu/archives/win2021/entries/epistemology-social/.

David W. Johnson & Roger T. Johnson (1999) Making Cooperative Learning Work, Theory Into Practice, 38:2, 67-73.

David W. Johnson & Roger T. Johnson (1989). Cooperation and Competition: Theory and Research. United States: Interaction Book Company

**ವಿನಯ್ ನಾಡಗೀರ್** ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶಿಕ್ಷಕ ಶಿಕ್ಷಣ ತಂಡದ ಭಾಗವಾಗಿದ್ದಾರೆ. ಅವರು ಬಿಎಸ್‌ಸಿ ಬಿಎಡ್ ಕಾರ್ಯಕ್ರಮದ ಶಿಕ್ಷಕರಾಗಿದ್ದು, ಅವರ ಆಸಕ್ತಿಯ ಕ್ಷೇತ್ರಗಳು ಭಾಷೆ ಮತ್ತು ಸಾಕ್ಷರತೆಯಾಗಿದೆ. ಅವರಿಗೆ ಶಾಲೆಯೊಂದರಲ್ಲಿ ಒಂದು ದಶಕಕ್ಕೂ ಹೆಚ್ಚಿನ ಸಮಯ ಕಲಿಸಿದ ಅನುಭವವಿದೆ ಹಾಗೂ ಶಿಕ್ಷಕ ಅಸ್ಮಿತೆ ಮತ್ತು ಶಾಲಾ ವಲಯದಲ್ಲಿ ಮೂಡುವ ಬಿಕ್ಕಟ್ಟುಗಳ ವಿಷಯಗಳಲ್ಲಿ ಇವರಿಗೆ ಗಾಢವಾದ ಆಸಕ್ತಿಯಿದೆ. ವಿನಯ್ ನಾಡಗೀರ್ ಅವರನ್ನು vinay.nadgir@apu.edu.in ಮೂಲಕ ಸಂಪರ್ಕಿಸಬಹುದು.

ಅನುವಾದ : ಸ್ವಯಂಪ್ರಭಾ ಹೆಗಡೆ

ಪರಿಶೀಲನೆ : ಚಂದ್ರಶೇಖರ್ ಮಂಡೆಕೋಲು